# ಸಮಾಜಮುಖಿ ಕನಕದಾಸ

**ರಮೇಶ.ಡಿ**

ಸಂಶೋಧನಾ ವಿದ್ಯಾರ್ಥಿ, ಕುವೆಂಪು ವಿಶ್ವವಿದ್ಯಾನಿಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ, ಶಿವಮೊಗ್ಗ (ಜಿಲ್ಲೆ).

ಭಾರತೀಯ ಸಾಮಾಜಿಕ ಪರಂಪರೆಯಲ್ಲಿ ಭಕ್ತಿ ಆಂದೋಲನವು ಅತ್ಯಂತ ಪ್ರಮುಖವಾದುದು. ಇದರ ಪ್ರಮುಖ ಕಾಳಜಿ ಎಂದರೆ ವ್ಯಕ್ತಿ ಹಾಗು ಸಮಾಜದ ಉನ್ನತಿ. ಭಕ್ತಿ ಪಂಥದ ಪ್ರವರ್ತಕರೆಲ್ಲರೂ ಆತ್ಮೋನ್ನತಿಯ ಜೊತೆಗೆ ಸಮಾಜೋನ್ನತಿಯನ್ನು ಬಯಸಿದ್ದು ಬಹುಮುಖ್ಯವೆನಿಸುತ್ತದೆ. ಚಳುವಳಿಯೋಪಾದಿಯಲ್ಲಿ ಬೆಳೆದ ಭಕ್ತಿಯ ಆಂದೋಲನ ಸಾಮಾನ್ಯ ಜನರಲ್ಲಿ ಜ್ಞಾನ, ಕರ್ಮ, ಭಕ್ತಿ ಎಂದು ವ್ಯಕ್ತಿಗಳನ್ನು ಶರಣಾಗತ ಮೌಲ್ಯವಾಗಿ ಪರಿವರ್ತಿಸಿತು. ಅಲ್ಲದೆ ಆಧ್ಯಾತ್ಮಿಕ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಜನಪರ ನಿಲುವುಗಳನ್ನು ಪ್ರಕಟಿಸಿ ಸಮಾಜ ಪರಿವರ್ತನೆಗೆ ಬುನಾದಿ ಹಾಕಿತು. ೧೨ನೇ ಶತಮಾನದಲ್ಲಿ ಶರಣರು ಆಡುಮಾತಿನಲ್ಲಿ ವಚನಗಳನ್ನು ರಚಿಸಿ ಅರಿವನ್ನು ಮೂಡಿಸಿದರೆ ದಾಸರು ಕೀರ್ತನೆಗಳು ಹಾಗು ಸಂತರು ತತ್ವಪದಗಳ ಮೂಲಕ ಜನಜಾಗೃತಿಯನ್ನು ಬಿತ್ತರಿಸಿದರು. ಈ ಹಿನ್ನೆಲೆಯಲ್ಲಿ ಸಮಾಜವನ್ನು ಜಾಗೃತಗೊಳಿಸಿ ಸಾಮಾಜಿಕ ಪ್ರಗತಿ ಮಾನವ ಕುಲದ ಏಳಿಗೆಯ ಕನಸು ಕಂಡ ಭಕ್ತರಲ್ಲಿ ಕನಕದಾಸರು ಮತ್ತು ಶಿಶುನಾಳ ಶರೀಫರು ಅಗ್ರಗಣ್ಯರೆನಿಸುತ್ತಾರೆ.

ತಳಸಮುದಾಯವೊಂದರಲ್ಲಿ ಹುಟ್ಟಿ ಹರಿದಾಸ ಪರಂಪರೆಯ ಕೂಟಕ್ಕೆ ಸೇರಿ ವೈದಿಕ ಕುಲಕ್ಕೆ ಸೆಡ್ಡು ಹೊಡೆದು ಇಷ್ಟದೈವವನ್ನು ತನ್ನೆಡೆಗೆ ಸೆಳೆದು ಸೈ ಎನಿಸಿಕೊಂಡ ಕನಕದಾಸರು ಮತ್ತು ಹುಟ್ಟುನಿಂದ ಮೈಗಂಟಿದ ಮತವನ್ನು ತಿರಸ್ಕರಿಸದೆ ಅನ್ಯಧರ್ಮವೊಂದರ ಗುರುದೀಕ್ಷೆ ಪಡೆದು ಮತ ಮೌಢ್ಯಗಳಿಂದ ಅಜ್ಞಾನದ ಜಾಡನ್ನು ತೊಡೆದು ಮಾನವ ಕುಲಕ್ಕೆ ಮುಕ್ತಿ ಪಥವನ್ನು ತೋರಿಸಿಕೊಟ್ಟ ಸಂತ ಶಿಶುನಾಳ ಶರೀಫರ ಚಿಂತನೆಗಳನ್ನು ಪ್ರಸ್ತುತ ಸಮಾಜದ ಮುಂದಿಟ್ಟು ತರ್ಕಿಸುವ ಅನಿವಾರ್ಯತೆಯಿದೆ. ಇಬ್ಬರು ಸಮಾಜಮುಖಿ ಚಿಂತಕರೇ. ಜನರ ಮಧ್ಯೆ ಇದ್ದುಕೊಂಡೆ ಸಮಾಜದ ಓರೆಕೋರೆಗಳನ್ನು ತಿದ್ದುತ್ತಾ ಜನರನ್ನು ಆಧ್ಯಾತ್ಮದತ್ತ ಕೊಂಡೊಯ್ಯಬಲ್ಲ ಶ್ರೇಷ್ಠ ಚಿಂತಕರೆನಿಸುತ್ತಾರೆ. ಜಾತಿಗಿಂತ ನೀತಿ ಮಾನವೀಯತೆಗಳೇ ಶ್ರೇಷ್ಠವೆಂಬ ಪ್ರತಿಪಾದನೆ ಅವರದು. ತಾತ್ವಿಕ ನೆಲೆಗಟ್ಟಿನ ಮೇಲೆ ಬದುಕಿನ ಸ್ಥಿರತೆಗೆ ಅಮೌಲ್ಯವಾದ ಕಾಣಿಕೆಯನ್ನು ನೀಡಿದ್ದರಿಂದ ಪ್ರಸ್ತುತ ಸಮಾಜಕ್ಕೆ ಇವರ ಚಿಂತನೆಗಳು ಅಮೂಲ್ಯವಾಗಿವೆ.

ಕನಕದಾಸರು ಕಲಿ, ಕವಿ, ಕೀರ್ತನಕಾರರಾಗಿ ವಿಶಿಷ್ಟ ವ್ಯಕ್ತಿತ್ವವುಳ್ಳ ಮಹಾನುಭಾವರಾಗಿ, ದಾರ್ಶನಿಕರಾಗಿ ನಮ್ಮ ಮುಂದೆ ನಿಲ್ಲುತ್ತಾರೆ. ಅವರ ಸಾಹಿತ್ಯದಲ್ಲಿ ಸಾಮಾಜಿಕ, ಧಾರ್ಮಿಕ, ರಾಜಕೀಯ ಹಾಗು ಚಾರಿತ್ರಿಕವನ್ನು ಒಳಗೊಂಡಂತೆ ಅನೇಕ ಸಂಗತಿಗಳು ಕಂಡು ಬರುತ್ತವೆ. ಹಿಂದೂ ಸಮಾಜದ ಕೆಳ ಸಮುದಾಯದಿಂದ ಬಂದ ಕನಕದಾಸರ ಮನೋಧರ್ಮ ಇತರ ದಾಸರಿಗಿಂತ ಭಿನ್ನವಾದುದು ಹಾಗು ವಿಶಿಷ್ಟವಾದುದು. ಸಮಾಜ ಸುಧಾರಣೆಗೆ ಒತ್ತು ನೀಡಿದ್ದಷ್ಟೇ ಅಲ್ಲದೆ ಭಾರತೀಯ ಸಮಾಜದ ನಿಯಂತ್ರಕ ಶಕ್ತಿಯಾಗಿದ್ದ ಜಾತೀಯತೆ, ಶ್ರೇಷ್ಠ–ಕನಿಷ್ಠವೆಂಬ ತಾರತಮ್ಯ ಭಾವನೆಯನ್ನು ಕನಕದಾಸರಷ್ಟು ತೀವ್ರವಾಗಿ ಖಂಡಿಸಿದ ಮತ್ತೊಬ್ಬ ದಾಸನಿಲ್ಲ. ಸಾಮಾಜಿಕ ಅಂಧಃಶ್ರದ್ಧೆ, ಮೇಲು–ಕೀಳು, ವರ್ಣ–ವರ್ಗ ಎಂಬ ಬೇಧ–ಭಾವಗಳು ದಟ್ಟವಾಗಿದ್ದ ಆ ಕಾಲದಲ್ಲಿ ಕನಕದಾಸರು ಪ್ರಗತಿಪರರಾಗಿ ಆಲೋಚಿಸಿರುವುದು ಅವರ ನೇರ ನಿಲುವಿಗೆ ಸಾಕ್ಷಿಯಾಗಿದೆ. ತಾನು ಕಂಡುಂಡ ನೋವನ್ನು ಯಾರ ಹಂಗು ಇಲ್ಲದೆ ದಿಟ್ಟವಾಗಿ ಆ ಕಾಲದಲ್ಲಿಯೇ ಅಭಿವ್ಯಕ್ತಿಸಿದ ಅವರ ನಿಲುವು ನಿಜಕ್ಕೂ ಅಚ್ಚರಿಯೆನಿಸುತ್ತದೆ.

"ಕನಕದಾಸರಲ್ಲಿ ಧಾರ್ಮಿಕ ಔನ್ನತ್ಯ ಹಾಗು ಸಾಮಾಜಿಕ ಸಾಮರಸ್ಯದ ಒತ್ತಾಸೆಯಿದೆ. ಪ್ರಜ್ಞಾವಂತ ಚಿಕಿತ್ಸಕ ಮನೋಭಾವ ಎದ್ದು ಕಾಣುತ್ತದೆ. ಅವರು ಕೊಟ್ಟಂತ ಕಾವ್ಯಗಳು ಕೇವಲ ಪ್ರತಿಭೆ, ಪಾಂಡಿತ್ಯದ ದ್ಯೋತಕಗಳಾಗಿರದೆ, ಏಕಕಾಲದಲ್ಲಿ ತತ್ವಶಾಸ್ತ್ರಗಳ ಹಾಗು ಅನುಭಾವದರ್ಶನಗಳಿಂದ ಕೂಡಿವೆ. ಇಂದು ಜಾಗತೀಕರಣ, ಉದಾರೀಕರಣಗಳಿಂದ ಜಗತ್ತು ತಲ್ಲಣಕ್ಕೊಳಗಾಗಿದೆ. ಮಾನವೀಯತೆ ವ್ಯಾಪಾರೀಕರಣವಾಗುತ್ತಿರುವ ಈ ದಿನಗಳಲ್ಲಿ ಸಮುದಾಯಗಳನ್ನು ಬೆಸೆಯುವ, ಹೊಸ ಸಮಾಜವನ್ನು ಕಟ್ಟುವ ಪರಿವರ್ತನಾಕಾರರಿಗೆ ಅವರ ಚಿಂತನೆಗಳು ಮಾರ್ಗದರ್ಶಕಗಳಾಗಿವೆ. ಮಾನವ ಸಂಬಂಧಗಳು, ಮನುಷ್ಯತ್ವದ ಲಕ್ಷಣಗಳು, ಸಾಂಸ್ಕೃತಿಕ ಬೆಸುಗೆಗಳನ್ನು ಹೊಸೆದು ಕಟ್ಟಿಕೊಡುವಲ್ಲಿ ಅವರ ಸಾಹಿತ್ಯದ ಕೊಡುಗೆ ಅಮೂಲ್ಯವಾದುದು". ಎಂಬ ಡಾ. ಶ್ರೀರಾಮ ಅಚನೂರರ ಮಾತುಗಳು ನಿಜಕ್ಕೂ ಉಲ್ಲೇಖನಾರ್ಹವೆನಿಸುತ್ತದೆ.

ಕನಕದಾಸರಂತೆಯೇ ಶರೀಫರೂ ಸಹ ಅಂದಿನ ಸಮಾಜದ ಸಂಸ್ಕೃತಿಯ ಪ್ರತಿಬಿಂಬವಾಗಿದ್ದಾರೆ. ಶಿಶುನಾಳದಲ್ಲಿ ಹುಟ್ಟಿ ಬಾಳಿ ಬೆಳೆದ ಶರೀಫರು ಅಲ್ಲಿನ ಸ್ಥಳೀಯ ಸಾಮಾಜಿಕ ಆಗುಹೋಗುಗಳಿಗೆ, ಸಾಂಸ್ಕೃತಿಕ ಸಂವೇದನೆಗಳಿಗೆ ತೀವ್ರವಾಗಿ ಸ್ಪಂದಿಸುತ್ತಾ ತಮ್ಮ ಅನುಭವಗಳನ್ನು ತತ್ವಪದಗಳಲ್ಲಿ ಪಡಿಮೂಡಿಸಿದ್ದಾರೆ. ಭಕ್ತಿಯ ಜೊತೆಗೆ ಸಾಮಾಜಿಕ ಚಿಂತನೆಯುಳ್ಳ ಶರೀಫರ ತತ್ವಪದಗಳು ಸಮಕಾಲೀನ ಜೀವನ ಮೌಲ್ಯಗಳನ್ನು ಪ್ರತಿಪಾದಿಸುವುದರ ಮೂಲಕ ಜನರ ಬದುಕಿಗೆ ಅತ್ಯಂತ ಹತ್ತಿರವಾಗಿವೆ. ಅಲ್ಲದೆ, ಸರ್ವಕಾಲೀನ ಆಶಯವನ್ನು ದರ್ಶಿಸಿವೆ. ಭಕ್ತಿಯ ನೆಲೆಯಲ್ಲಿ ಸಾಮಾಜಿಕ ಚಿಂತನೆಯನ್ನು ಮಾಡಿದ ಶರೀಫರ ದೃಷ್ಠಿಯಲ್ಲಿ ಲೌಕಿಕ ಮತ್ತು ಅಲೌಕಿಕ ಬದುಕು ಬೇರೆಬೇರೆಯಲ್ಲ, ಅವೆರಡೂ ಒಂದೇ.

ಶರೀಫರೇ ಹೇಳುವಂತೆ ಧರ್ಮದ ಉದ್ದೇಶ ಮಾನವ ಕಲ್ಯಾಣಕ್ಕಾಗಿಯೇ ಹೊರತು ಜಾತಿ, ಮತ, ವರ್ಗ, ಬೇಧಗಳ ವಿಂಗಡಣೆಗಳಲ್ಲ. ಧರ್ಮ-ದೇವರುಗಳ ಹೆಸರಿನಲ್ಲಿ ರೂಢಮೂಲವಾಗಿದ್ದ ಅನಿಷ್ಟಗಳನ್ನು ಖಂಡಿಸಿ ವ್ಯಕ್ತಿ, ಧರ್ಮ ಮತ್ತು ಸಮಾಜದ ಶುದ್ಧೀಕರಣವನ್ನು ತಮ್ಮ ಪದಗಳ ಮೂಲಕ ವ್ಯಕ್ತಪಡಿಸಿದ್ದಾರೆ. ಜನಜೀವನದಲ್ಲಿ ಹಾಸುಹೊಕ್ಕಾಗಿರುವ ಅನ್ಯಾಯ, ಅನೀತಿ, ಡಂಭಾಚಾರ, ಶೋಷಣೆ, ಮೂಢನಂಬಿಕೆ ಮತ್ತು ಅಂಧಶ್ರದ್ಧೆಯಂತಹ ಸಾಮಾಜಿಕ ವಿಕಾರಗಳನ್ನು ತಮ್ಮ ತತ್ವಪದಗಳ ಮೂಲಕ ವಿಡಂಬಿಸಿದ್ದಾರೆ. "ಕನಕದಾಸರಂತೆಯೇ ಕುಲನೆಲೆಗಳ ಹಂಗಿಲ್ಲದ ಅಜ್ಞಾನ ಪರಂಪರೆಯೊಂದು ಅಮೂರ್ತ ರೂಪದ ಅರಿವೇ ಗುರು ಎಂಬ ತಾತ್ವಿಕ ಎಚ್ಚರದಲ್ಲಿ ತತ್ವಪದಗಳನ್ನು ಹಾಡುತ್ತಾ, ಪ್ರಾಪಂಚಿಕ ಸುಖದಲ್ಲಿ ಕಳೆದುಹೋಗುತ್ತಿರುವ ಜನಸಾಮಾನ್ಯರಿಗೆ ಅನುಭವದ ಬೆಳೆಯನ್ನು ಬಿತ್ತಿ ಬೆಳೆದವರು ಶಿಶುನಾಳ ಶರೀಫರು. ಇವರ ಆಧ್ಯಾತ್ಮದ ಕಲ್ಪನೆ ಅಂದಿನ ಸಮಾಜದ ಜಾತಿ, ಧರ್ಮ, ಭಾಷೆ, ಪಂಥ ಮತ್ತು ಭೌಗೋಳಿಕ ಗಡಿಗಳನ್ನು ಮೀರಿ ಬೆಳೆದು ನಿಂತು ಕುವೆಂಪು ಅವರ ವಿಶ್ವಮಾನವ ಪ್ರಜ್ಞೆಯನ್ನು ಸಾಕಾರಗೊಳಿಸುತ್ತಿರುವ ಮೌಖಿಕ ಪ್ರಕಾರಗಳು." ಎಂಬ ಕೆ.ಎ.ದಯಾನಂದ ಅವರ ಮಾತುಗಳು ಪ್ರಸ್ತುತವೆನಿಸುತ್ತವೆ.

ಶರೀಫರ ಸಾಮಾಜಿಕ ಪದಗಳಲ್ಲಿ ಕಾಣುವ ಸಾಮಾಜಿಕ ಆರೋಗ್ಯದ ಕಾಳಜಿ ಶಾಕ್‌ಟ್ರೀಟ್‌ಮೆಂಟ್‌ನಂತೆ ಅವರು ನೀಡುವ ವ್ಯಂಗ್ಯದ ಮೊನಚು ಅತ್ಯಂತ ಹರಿತವಾದುದು. ವ್ಯಕ್ತಿಪದಗಳೇ ಆಗಲಿ ಭಕ್ತಿಪದಗಳೇ ಆಗಲಿ ಅವುಗಳಲ್ಲಿ ಸಮಾಜದ ಓರೆಕೋರೆಗಳನ್ನು ತಿದ್ದುವ ಚಿಕಿತ್ಸಕ ಮನೋಭಾವ ಇದ್ದೇ ಇರುತ್ತದೆ. ಉದಾಹರಣೆಗೆ-

'ಬಲುನಾತಾ ಬಲುನಾತಾ ಮನ
ಮಲಿನ ತೊಳೆಯದಿರೆ ಹೊಲಸಾಯ್ತುವ್ವಾ
ನಾಯಿ ಸತ್ತು ಕೊಳೆತರೆ ನಾತಲ್ಲಾ
ಕಾಯಿ ಕೆಟ್ಟು ಹುಳಿತರೆ ನಾತಲ್ಲಾ
ಬಾಯಿ ಕಚ್ಚಿ ಕಂಡ ಹೆಂಡ ತಿಂಬುವ
ಪಾಯಗಟ್ಟಿ ಮನುಜರು ನಾತವ್ವಾ' – ಎನ್ನುತ್ತಾರೆ.

ಸಮಾಜಜೀವಿಯಾದ ಮಾನವನು ಇತರೆ ಪ್ರಾಣಿಗಳಿಗಿಂತ ಭಿನ್ನವಾದ ವ್ಯಕ್ತಿತ್ವವುಳ್ಳವನು. ಹಾಗೆಯೇ ಮನಸ್ಸಿರುವ ಏಕೈಕ ಜೀವಿ. ಆದರೆ ಮನದಲ್ಲಿರುವ ಮಲೀನವನ್ನು ತೊಳೆಯದಿದ್ದರೆ ಮನುಷ್ಯನ ಬದುಕೇ ಬಲು ನಾತ ಎಂಬ ಪೀಠಿಕೆ ಹಾಕುತ್ತಲೇ ವ್ಯಸನಗಳಿಗೆ ಬಲಿಯಾದವನನ್ನು ಪಾಯಗಟ್ಟಿ ಎಂದು ದಿಟ್ಟತನದಿಂದಲೇ ಜರಿಯುತ್ತಾರೆ.

ಶರೀಫರಂತೆ ಕನಕದಾಸರು ಸಮಾಜಕ್ಕಂಟಿದ ಹಲವು ಅಂಧಕಾರಗಳನ್ನು ತೊಳೆಯಬಲ್ಲ ದೊಡ್ಡ ವೈದ್ಯರೇ. ವರ್ಣ-ವರ್ಗ ಆಧಾರಿತ ಭಾರತೀಯ ಸಮಾಜದ ಬಾಹ್ಯ ಚಹರೆ ಈಗ ಬದಲಾಗಿರಬಹುದು. ಆದರೆ ಅಂತರಂಗದ ವಿಷದ ತೀವ್ರತೆ ತಗ್ಗಿಲ್ಲ. ವರ್ಣವ್ಯವಸ್ಥೆಯ ಕಡು ವಿರೋಧಿಯಾದ ಕನಕ ತನ್ನ ಹೀನ ಜಾತಿಯ ದೆಸೆಯಿಂದಾಗಿ ವಿವಿಧ ಸನ್ನಿವೇಶಗಳಲ್ಲಿ ಅನುಭವಿಸಿದ ಅಪಮಾನ, ನೋವು ಕೊನೆತನಕ ಆತನ ಬೆನ್ನು ಬಿಡಲಿಲ್ಲ. ಆದರೂ ಜಾತ್ಯಾತೀತ ಸಮಾಜದ ಪರಿಕಲ್ಪನೆ ಸಮಾನತೆಯನ್ನು ಸಾರುವುದು ಹಾಗೂ ಸಮಾಜದ ಎಲ್ಲ ವರ್ಗದವರನ್ನು ಒಂದೇ ಜಾತಿಗೆ ತರುವುದೇ ಅವರ ಉದ್ದೇಶವಾಗಿತ್ತು.

ತೊಲಗುವರು ಕಡೆಕಡೆಗೆ ತಾ ಹೊಲೆ
ಹೊಲೆಯೆನುತ ಕಳವಳಿಸಿ ಮೂತ್ರದ
ಬಿಲದೊಳಗೆ ಬಂದಿಹುದ ಕಾಣದೆ ಬರಿದೆ ಮನನೊಂದು

ಜಲದೊಳಗೆ ಮುಳುಗಿದರೆ ತೊಲಗದು

ಹೊಲೆಗೆಲಸವೀ ದೇಹದೊಳು......! (ಹರಿಭಕ್ತಿಸಾರ – ೯೮)

ಮನುಷ್ಯನ ಹುಟ್ಟಿನ ಮೂಲವೇ ಅಸ್ಪಶ್ಯವಾಗಿದೆ. ಹುಟ್ಟಿದ ಮೇಲೆ ತಾನು ಬಹು ಶುದ್ಧನೆಂದು ಹೇಳಿಕೊಳ್ಳುವುದು ಹಾಸ್ಯಾಸ್ಪದ. ಸುಜಾತರು–ಕುಜಾತರಿಗಿಂತಲೂ ಕೀಳಾದ ಕುಕಾರ್ಯವನ್ನು ಮಾಡಿ ನಂತರ ನೀರಲ್ಲಿ ಮುಳುಗು ಹಾಕಿದರೆ ಮಾಡಿದ ಪಾಪ ತೊಳೆಯುವುದಿಲ್ಲ ಎನ್ನುತ್ತಾರೆ. ಅಂತರಂಗದ ಶುದ್ಧಿಗೆ ಹೆಚ್ಚಿನ ಒತ್ತನ್ನು ನೀಡುತ್ತಾರೆ. ಸಮಾಜದಲ್ಲಿರುವ ಜಾತಿ ವ್ಯವಸ್ಥೆಯನ್ನು ಬುಡಮೇಲು ಮಾಡುವುದೇ ಕನಕದಾಸರ ಗುರಿಯಾದಂತೆ ತೋರುತ್ತದೆ.

ಕನಕದಾಸರು ಮತ್ತು ಶಿಶುನಾಳ ಶರೀಫರ ಚಿಂತನೆಗಳನ್ನು ಈ ಸಮಾಜದ ಸಮಕಾಲೀನ ಸಂದರ್ಭದಲ್ಲಿ ಎರಡು ಬಗೆಯಿಂದ ಪರಿಶೀಲಿಸಬಹುದು. ಮೊದಲನೆಯದು ಆಧುನಿಕ ಜಗತ್ತಿನ ಭೌತಿಕ ತೊಳಲಾಟಗಳಲ್ಲಿ, ದಾಹಗಳಲ್ಲಿ ಕಂಗೆಟ್ಟ ಜನರಿಗೆ ಭಕ್ತಿ ಮಾರ್ಗದ ಮೂಲಕ ಶಾಂತಿ ನೆಮ್ಮದಿಗಳನ್ನು ದೊರಕಿಸಿಕೊಡುವುದು. ಅಂದರೆ ಆಧ್ಯಾತ್ಮದ ಅಂಥಾನುಭೂತಿಯು ಶ್ರೇಣೀಕೃತ ಸಮಾಜದಲ್ಲಿ ಕೆಲವರ ಸೊತ್ತಾಗಿರದೆ ಎಲ್ಲರ ತುತ್ತಾಗುವಂತೆ ನೋಡಿಕೊಳ್ಳುವ ಸಾಮಾಜೀಕರಣದ ಪ್ರಕ್ರಿಯೆ. ಎರಡನೆಯದು, ಧರ್ಮದ ಹೆಸರಿನಲ್ಲಿ, ದೇವರ ಹೆಸರಿನಲ್ಲಿ ಅಮಾಯಕ ಜನರ ಭಾವನೆಗಳನ್ನು ಕೆರಳಿಸಿ ಬೇಳೆ ಬೇಯಿಸಿಕೊಳ್ಳುವ ಇಂದಿನ ದಿನಗಳಲ್ಲಿ ಸರ್ವಧರ್ಮ ಸಮನ್ವಯದ ಸಾಮರಸ್ಯದ ಬೋಧನೆಯ ಮೂಲಕ ಶಾಂತಿಯನ್ನು ಸ್ಥಾಪಿಸುವುದು.

ಹೀಗೆ ಕಾಲಘಟ್ಟಗಳು ಬೇರೆಬೇರೆಯಾದರು ಪ್ರಾದೇಶಿಕವಾಗಿ ಒಂದೇ ಭಾಗದವರಾದ ಕನಕದಾಸರು ಮತ್ತು ಶರೀಫರು ಸಮಾಜದ ಅರ್ಥಹೀನ ಸಾಂಪ್ರಾಯಿಕತೆಗಳ ವಿರುದ್ಧ ಪ್ರತಿಭಟನೆಯ ಕಿಡಿ ಕಾರಿದ್ದರೂ ಇಂದು ಮತ್ತೆ ಜನ ಅದೇ ಜಡ್ಡು ಬಿದ್ದ ಸಂಪ್ರದಾಯದ ಜಾಡಿಗೆ ಬಿದ್ದು ಕುರುಡು ಆಚರಣೆಗಳೊಳಗೆ ಬದುಕು ಸವೆಸುತ್ತಿರುವುದು ವಿಪರ್ಯಾಸವೆನಿಸುತ್ತದೆ.

ಕೊನೆ ಟಿಪ್ಪಣಿ:

೧. ಡಾ. ಶ್ರೀರಾಮ ಅಚನೂರ: ಕನಕದಾಸರ ಚಿಂತನೆಯ ನೆಲೆ ಮತ್ತು ದರ್ಶನ. ಪುಟ. ೪. ಗಗನ ಪ್ರಕಾಶನ, ಬಾಗಲಕೋಟೆ–೨೦೧೨

೨. ಕೆ.ಎ.ದಯಾನಂದ : ಶಿಶುನಾಳ ಶರೀಫರ ತತ್ವಪದಗಳು, ಪುಟ. ೦೯, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು–೨೦೧೭.

ಪರಾಮರ್ಶನ ಗ್ರಂಥಗಳು :

೧. ಡಾ.ಶಿವಾನಂದ ಕೆಳಗಿನಮನಿ : ಕನಕದಾಸರ ಕೀರ್ತನೆಗಳ ಸಾಂಸ್ಕೃತಿಕ ಅನನ್ಯತೆ, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ಬೆಂಗಳೂರು–೨೦೧೫.

೨. ಡಾ. ಶ್ರೀರಾಮ ಅಚನೂರ: ಕನಕದಾಸರ ಚಿಂತನೆಯ ನೆಲೆ ಮತ್ತು ದರ್ಶನ. ಪುಟ. ೪.ಗಗನ ಪ್ರಕಾಶನ, ಬಾಗಲಕೋಟೆ–೨೦೧೨

೩. ಶಿವಾನಂದ ಗುಬ್ಬಣ್ಣವರ : ಶಿಶುನಾಳ ಶರೀಫರ ತತ್ವಪದಗಳು, ಕನ್ನಡ ಪುಸ್ತಕ ಪ್ರಾಧಿಕಾರ,ಬೆಂಗಳೂರು–೨೦೧೭.

೪. ಡಾ.ಮಂಜುಳ ಮಲ್ಹಾರಿ : ಬೋಧ ಒಂದೇ ಬ್ರಹ್ಮನಾದ ಒಂದೇ – ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು– ೨೦೧೨.

೫. ಡಾ.ರಾಮಚಂದ್ರ ಪರಮೇಶ್ವರ ಹೆಗಡೆ : ಶಿಶುನಾಳ ಶರೀಫ ಮತ್ತು ಸಂತ ಕಬೀರ ತೌಲನಿಕ ಧ್ಯಯನ, ಸಮಾಜಶಿಕ್ಷಣ ವಿಶ್ವಸ್ಥ ಸಮಿತಿ, ಸಿದ್ಧಾಪುರ.